ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ ವಾರ್ಡ್ ಸಮಿತಿ/ ಸಹಾಯಕ ಅಭಿಯಂತರರವರ ಕಛೇರಿ, ವಾರ್ಡ್ ಸಂಖ್ಯೆ 176 ಬಿ.ಟಿ.ಎಂ
ಬಡಾವಣೆ 16ನೇ ಮುಖ್ಯರಸ್ತೆ, ಬಿ.ಟಿ..ಎಂ 2ನೇ ಹಂತ, ಬೆಂಗಳೂರು -560076

ದಿನಾಂಕ: 02/12/2020

## ಸಭೆ ತಿಳುವಳಿಕೆ ಪತ್ರ

**ವಿಷಯ:- ದಿನಾಂಕ: 05/12/2020 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.**

**ಉಲ್ಲೇಖ:- ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶ ಪತ್ರ ಸಂ: ಬಿ12(5)/ಪಿ.ಆರ್/35/2020-21, ದಿನಾಂಕ: 21/09/2020**

*****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣವಲಯದ ವಾರ್ಡ್ ಸಂಖ್ಯೆ:176 ಬಿ.ಟಿ.ಎಂ ಬಡಾವಣೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಉಲ್ಲೇಖಿತ ಆದೇಶದಂತೆ ಪ್ರತಿ ಮಾಹೆಯ 1ನೇ ಮತ್ತು 3ನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಕರೆಯಬೇಕಾಗಿದ್ದು, ಅದರಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 05/12/2020ರ ಶನಿವಾರದಂದು ಬೆಳಿಗ್ಗೆ 11:00 ಗಂಟೆಗೆ ಕೆಂಪೇಗೌಡ ಆಟದ ಮೈದಾನ 9ನೇ ಮುಖ್ಯರಸ್ತೆ, ವಾಟರ್ ಟ್ಯಾಂಕ್ ಹತ್ತಿರ, ಪಾಲಿಕೆ ಕಛೇರಿಯಲ್ಲಿ ಸಭೆಯನ್ನು ನಿಗದಿಪಡಿಸಲಾಗಿರುತ್ತದೆ ಈ ಸಂಬಂಧ ಸಮಿತಿಯ ಎಲ್ಲಾ ಮಾನ್ಯ ಸದಸ್ಯರುಗಳು ಹಾಗೂ ಕೆಳಕಂಡ ಅಧಿಕಾರಿ/ನೌಕರರ ವರ್ಗದವರು ದಯವಿಟ್ಟು ಸಭೆಗೆ ತಪ್ಪದೆ ಹಾಜರಾಗಿ, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಲು ಕೋರಿದೆ ಮತ್ತು ಅಧಿಕಾರಿ/ನೌಕರರು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿಗಳೊಂದಿಗೆ ಹಾಜರಾಗಲು ಕೋರಿದೆ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು:-** 1) ಘನತ್ಯಾಜ್ಯ ನಿರ್ವಹಣೆ ಬಗ್ಗೆ 2) ಕುಡಿಯುವ ನೀರು ಮತ್ತು ಒಳಚರಂಡಿ ಕುಂದುಕೊರತೆ 3) ಮಳೆಯಿಂದ ಸಂಭವಿಸಬಹುದಾದ ಅನಾಹುತಗಳು ಬಗ್ಗೆ 4) ವಾರ್ಡ್ ವ್ಯಾಪ್ತಿಯ ಪ್ರಸ್ತುತ ಕಾಮಗಾರಿಗಳ ನಿರ್ವಹಣೆ ಬಗ್ಗೆ 5) ಬೀದಿ ದೀಪಗಳ ನಿರ್ವಹಣೆ ಬಗ್ಗೆ ಕ್ರಮ ಕಯಗೊಳ್ಳುವ ಬಗ್ಗೆ 6) ಕೋವಿಡ್-19 ವಿಷಯದ ಬಗ್ಗೆ.

2/12/2020
ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ರವರಿಗೆ :-**

1) **ಶ್ರೀ. ವೆಂಕಟೇಶ್.ಎಸ್**, ಐ.ಆರ್.ಎಸ್ ಜಂಟಿ ಆಯುಕ್ತರು ಹಣಕಾಸು ಬಿಬಿಎಂಪಿ / **ನೋಡಲ್ ಅಧಿಕಾರಿ** ಮಾನ್ಯ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು(ಘ.ತ್ಯಾ.ನಿ.ಅ.ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
4) ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ ವಿಭಾಗ ಎಸ್-16 ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು ಉಪ ವಿಭಾಗ ಎಸ್-6 ಬೆಂಗಳೂರು ನೀರುಸರಬರಾಜು ಮಂಡಳಿ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
7) ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಆರೋಗ್ಯ ವೈದ್ಯಾಧಿಕಾರಿಗಳು/ಹಿರಿಯ ಆರೋಗ್ಯ ಪರಿವೀಕ್ಷಕರು/ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಟಿ.ಎಂ ಲೇಔಟ್ ವಿಭಾಗದವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
9) ಸಹಾಯಕ ಕಂದಾಯ ಅಧಿಕಾರಿಗಳು ಬಿ.ಟಿ.ಎಂ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.3
10) ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಉಪವಿಭಾಗ ದಕ್ಷಿಣ ವಲಯ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
11) ಆರಕ್ಷಕ ಉಪನಿರೀಕ್ಷಕರು ಮೈಕೋ ಲೇಔಟ್ ಪೊಲೀಸ್ ಠಾಣೆ ಮತ್ತು ಸಂಚಾರಿ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

Scanned with CamScanner

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-176 ಬಿ.ಟಿ.ಎಂ ಬಡಾವಣೆ ಕಛೇರಿಯಲ್ಲಿ ದಿನಾಂಕ: 05.12.2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಬಿ.ಎಂ.,ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿಆರ್/35/2020-21/21-09-2020ರ ಆದೇಶದಂತೆ ನೊಡೆಲ್ ಅಧಿಕಾರಿಯನ್ನಾಗಿ ಶ್ರೀ.ವೆಂಕಟೇಶ್.ಎಸ್, ಐ.ಆರ್.ಎಸ್, ಜಂಟಿ ಆಯುಕ್ತರು, ಹಣಕಾಸು, ಬಿ.ಬಿ.ಎಂಪಿ.ರವನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರದ ಸ್ವಚ್ಚತೆ, ರಸ್ತೆ ನಿರ್ವಹಣೆ/ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ**

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ವೆಂಕಟೇಶ್.ಎಸ್, ಜಂಟಿ ಆಯುಕ್ತರು, ಹಣಕಾಸು ಬಿ.ಬಿ.ಎಂ. | 9480685634 |
| 2 | ಶ್ರೀ.ನರೇಶ್‌ಕುಮಾರ್.ಕೆ ಸ.ಇಂ-176 ವಾರ್ಡ್ | 9844407499 |
| 3 | ಶ್ರೀ.ಸಿದ್ಧಪ್ಪ ಕೆಲಸ ಪರಿವೀಕ್ಷಕರು ಬಿ.ಡಬ್ಲೂ.ಎಸ್.ಎಸ್.ಬಿ | 8073902972 |
| 4 | ಶ್ರೀ. ಪ್ರಹ್ಲಾದ್,ಕಿರಿಯ ಆರೋಗ್ಯ ಪರಿವೀಕ್ಷಕರು | 9972320005 |
| 5 | ಶ್ರಿ. ಮಲ್ಲಿಕಾರ್ಜುನ ಹಿರಿಯ ಆರೋಗ್ಯ ಪರಿವೀಕ್ಷಕರು | 9480685601 |
| 6 | ಶ್ರೀ.ಶರಣಪ್ಪ ಮಾರ್ಷಲ್ | 7483316635 |
| 7 | ಶ್ರೀ.ರಂಗನಾಥ್ ಟಿ. ಕಿರಿಯ ಅಭಿಯಂತರರು ಬೆಸ್ಕಾಂ | 9449840429 |
| 8 | ಶ್ರೀ ಕಿರಣ್‌ಕುಮಾರ್ ಸ.ಅ ಬೆಸ್ಕಾಂ | 9449840428 |
| 9 | ಶ್ರೀ.ವರದರಾಜ ಸ್ಯಾನಿಟರಿ ದಫೇದಾರ | 9886492565 |
| 10 | ಶ್ರೀ. ರವೀಂದ್ರ ಹೊಸಕೇರಿ | 9035412953 |
| 11 | ಶ್ರೀ.ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ ವೇದಿಕೆ | 9900111391 |
| 12 | ಶ್ರೀ.ತಿಮ್ಮೆಗೌಡ ಬೀದಿ ದೀಪಗಳ ನಿರ್ವಹಣೆ | 9738200615 |
| 13 | ಮುನಿರಾಜು ಸ್ಯಾನಿಟರಿ ದಫೇದಾರ | 9844884555 |
| 14 | ಶ್ರೀ.ನಾಗರಾಜು | 9886527424 |
| 15 | ಶ್ರೀ ಬಾಲಕೃಷ್ಣ ಎನ್ ಎಸ್ | 9742260352 |
| 16 | ಶ್ರೀ ಗುರುರಾಜ್ ರಾವ್ | 9448466868 |
| 17 | ಶ್ರೀಮತಿ ಗಾಯತ್ರಿ ಸೇನ್ | 9481653094 |
| 18 | ಶ್ರೀ ನರಸಿಂಹ ಮೇಸ್ತ್ರಿ | 9901261905 |
| 19 | ಶ್ರೀ ಚಿಟ್ಟಿ | 9844485981 |

* * * * * *

ದಿನಾಂಕ-05-12-2020ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ಗುರುರಾಜ್ ರಾವ್ ರವರು ಬಿ.ಟಿ.ಎಂ 2ನೇ ಹಂತದ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳಲ್ಲಿ ಕಸ ಮತ್ತು ಇತರೆ ಅನುಪಯುಕ್ತ ವಸ್ತುಗಳನ್ನು ಸಾರ್ವಜನಿಕರು ಹಾಕುತ್ತಿದ್ದು ಹಾಗೂ ಇತರ ಗಿಡಗಳು ಬೆಳೆದು ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಮಾಲೀಕರ ವಿರುದ್ಧ ಕ್ರಮವಹಿಸುವಂತೆ ಕೋರಿದರು.

ಈ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡಿ ಈಗಾಗಲೇ ಖಾಲಿ ನಿವೇಶನಗಳ ವಿವರವನ್ನು ಸಂಬಂಧಿಸಿದ ಕಂದಾಯ ಇಲಾಖೆಯಿಂದ ಪಡೆದುಕೊಂಡಿದ್ದು ಮಾನ್ಯ ಆಯುಕ್ತರ ಆದೇಶದಂತೆ ಪ್ರತಿ ಚದರ ಅಡಿಗೆ ರೂ, 2/- ಗಳಂತೆ ದಂಡ ವಿಧಿಸಿ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರಿಗೆ ತಿಳಿಸಿದರು.

**ಮಾನ್ಯ ಅಧ್ಯಕ್ಷರು ವಾರ್ಡ್ ಸಂಖ್ಯೆ** 176 ರವರು ಶ್ರೀ.ಶರಣಪ್ಪ ಮಾರ್ಷ್‌ಲ್ ರವರಿಗೆ ಬ್ಲಾಕ್ ಸ್ಪಾಟ್ ಗಳಲ್ಲಿ ಕಡ್ಡಾಯವಾಗಿ ಗಸ್ತು ತಿರಿಗಿ ಸಾರ್ವಜನಿಕರು ಕಸ ಎಸೆಯದಂತೆ ಕ್ರಮವಹಿಸಲು ಸೂಚಿಸಿದರು.

2. **ಅರಣ್ಯ ಇಲಾಖೆಯ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀಮತಿ. ಗಾಯತ್ರಿ ಸೇನ್ ರವರು ಮಾತನಾಡಿ 13ನೇ ಮುಖ್ಯರಸ್ತೆ 8ನೇ ಅಡ್ಡರಸ್ತೆಯಲ್ಲಿ ಸ್ವತ್ತಿನ ಸಂ:1434 ಮನೆಯ ಮುಂಬಾಗದ ಮರವು ತಮ್ಮ ಕಟ್ಟಡದ ಮೇಲೆ ಚಾಚಿಕೊಂಡಿದ್ದು ಮರದ ಕೊಂಬೆಗಳನ್ನು ತೆರವುಗೊಳಿಸಿ ಕೊಡುವಂತೆ ಕೋರಿದರು. ಹಾಗೂ ವಾರ್ಡ್ ಪ್ರದೇಶದ ವಿವಿಧ ವ್ಯಾಪ್ತಿಯಲ್ಲಿ ಕತ್ತರಿಸಿದ ಮರದ ಕೊಂಬೆಯ ಅವಶೇಷಗಳು ಹಾಗೆಯೇ ಬಿದ್ದಿದ್ದು ತುರ್ತಾಗಿ ತೆರವುಗೊಳಿಸುವಂತೆ ಕೋರಿದರು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಇತರೇ ಸಂಘ ಸಂಸ್ಥೆಯ ಸದಸ್ಯರುಗಳು ಸಹ ಈ ವಿಷಯದ ಬಗ್ಗೆ ಕ್ರಮವಹಿಸುವಂತೆ ಕೋರಿದರು.

ಈ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು ಮತ್ತು ಸಹಾಯಕ ಅಭಿಯಂತರರು ಮಾತನಾಡಿ ಕತ್ತರಿಸಿದ ಮರದ ಕೊಂಬೆಗಳ ಎಲೆಗಳನ್ನು ಘ.ತ್ಯಾ.ನಿ ರವರು ತೆರವುಗೊಳಿಸುವಂತೆಯು ಹಾಗೂ ಇತರೆ ದೊಡ್ಡದಾದ ಮತ್ತು ಸಣ್ಣ ಪ್ರಮಾಣದ ಮರದ ದಿಂಬಿಗಳನ್ನು ಅರಣ್ಯ ಇಲಾಖೆ ರವರು ತೆರವುಗೊಳಿಸಬೇಕಾಗಿದ್ದು ಈ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸೂಕ್ತ ಕ್ರಮವಹಿಸಲಾಗುವುದೆಂದು ತಿಳಿಸಿದರು.

**ಶ್ರೀ. ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ ವೇದಿಕೆ** ರವರು ಮಾತಾನಾಡಿ ಸ್ವತ್ತಿನ ಸಂಖ್ಯೆ 653,631,632,630 28ನೇ ಮುಖ್ಯರಸ್ತೆ ಈ ಕಟ್ಟಡಗಳ ಮುಂಬಾಗದಲ್ಲಿರುವ ಮರಗಳ ಒಣಗಿದ, ರೋಗಪೀಡಿತ ಮತ್ತು ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ಗುರುತಿಸಿ ಕೂಡಲೇ ತೆರವುಗೊಳಿಸುವಂತೆ ಈ ಹಿಂದೆ ಕೋರಿದ್ದರು ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ ಎಂದು ಅಧ್ಯಕ್ಷರಲ್ಲಿ ಕೋರಿದರು.

**ಮಾನ್ಯ ಅಧ್ಯಕ್ಷರು ರವರು ಮಾತನಾಡಿ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಅರಣ್ಯ ಇಲಾಖೆ ಬಿ.ಬಿ.ಎಂ.ಪಿ ಎ.ಸಿ.ಎಫ್ ರವರು ಸಭೆಗೆ ಹಾಜರಾಗಲು ತಿಳಿಸುವಂತೆ ಕಾರ್ಯದರ್ಶಿ ರವರಿಗೆ ಸೂಚಿಸಿದರು.**

3. **ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ. ನಾಗರಾಜ್ ರವರು ಮಾತನಾಡಿ ಬಿ.ಟಿ.ಎಂ 2ನೇ ಹಂತದಲ್ಲಿ ಸುಮಾರು 50 ಕಡೆಗಳಲ್ಲಿ ಸರಿಯಾಗಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ ಈ ಬಗ್ಗೆ ಅನೇಕ ಬಾರಿ ಸಂಬಂಧಿಸಿದ ಸ.ಅ ರವರಿಗೆ ತಿಳಿಸಿದರು ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಸಭೆಗೆ ತಿಳಿಸಿದರು, ಈ ವಿಷಯವಾಗಿ ಹಾಜರಿದ್ದ ಶ್ರೀ.ತಿಮ್ಮೆಗೌಡ ಬೀದಿ ದೀಪಗಳ ನಿರ್ವಹಣೆ ರವರು ಮಾತನಾಡಿ ಸಂಬಂಧಿಸಿದ ಅಭಿಯಂತರರಿಗೆ ತಿಳಿಸುವುದಾಗಿ ಹೇಳಿದರು

**ಮಾನ್ಯ ಅಧ್ಯಕ್ಷರು** ರವರು ಮಾತನಾಡಿ ಸಭೆಗೆ ಹಾಜರಿದ್ದ ಬೀದಿ ದೀಪ ನಿರ್ವಹಣೆಗಾರರಿಗೆ ಈ ಹಿಂದೆಯ 3 ಸಭೆಗಳಲ್ಲಿ ಬೀದಿ ದೀಪಗಳ ಬಗ್ಗೆ ಬಂದ ದೂರುಗಳನ್ನು ಈ ಕೂಡಲೇ ಪರಿಶೀಲಿಸಿ ಕ್ರಮವಹಿಸಲು ಸೂಚಿಸಿದರು, **ಹಾಗೂ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ** ಸಂಬಂಧಿಸಿದ ಸ.ಅ ರನ್ನು **ಸಭೆಗೆ ಹಾಜರಾಗಲು ತಿಳಿಸುವಂತೆ ಕಾರ್ಯದರ್ಶಿ ರವರಿಗೆ ಸೂಚಿಸಿದರು .**



Scanned with CamScanner

4. **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಬಗ್ಗೆ.**

**ಸಹಾಯಕ ಅಭಿಯಂತರರು** ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಕೆಲಸ ಪರಿವೀಕ್ಷಕರೊಂದಿಗೆ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಅಥವಾ ಪಾದಚಾರಿ ಮಾರ್ಗವನ್ನು ಅಗೆಯುವ ಮುನ್ನ ಬಿ.ಬಿ.ಎಂ.ಪಿ ವತಿಯಿಂದ ಅನುಮತಿ ಪಡೆದು ರಸ್ತೆ ಅಗೆಯುವಂತೆ ತಿಳಿಸಿದರು ಹಾಗೂ ತಮ್ಮ ಇಲಾಖೆವತಿಯಿಂದ ಕೈಗೊಂಡ ಕಾಮಗಾರಿಯ ಅನುಪಯುಕ್ತ ಮಣ್ಣನ್ನು ತೆರವುಗೊಳಿಸಲು ತಿಳಿಸಿದರು.

ಸಭೆಗೆ ಹಾಜರಿದ್ದ ಶ್ರೀ. ರವೀಂದ್ರ ಹೊಸಕೇರಿ ರವರು ಮಾತನಾಡಿ 9ನೇ ಮುಖ್ಯರಸ್ತೆ 2ನೇ ಅಡ್ಡರಸ್ತೆಯ ಒಳಚರಂಡಿಯಲ್ಲಿ ಸ್ಯಾನಿಟರಿ ನೀರು ಹರಿಯುತ್ತಿದ್ದು ಇದರಿಂದ ವಾಸನೆ ಬರುತ್ತಿದ್ದು ಸರಿಪಡಿಸುವಂತೆ ಕೋರಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ.ಸಿದ್ಧಪ್ಪ ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಮಾತನಾಡಿ ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು

5. **ಬೆಸ್ಕಾಂ ಇಲಾಖೆ ಬಗ್ಗೆ.**

**ಸಹಾಯಕ ಅಭಿಯಂತರರು** ರವರು ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರೊಂದಿಗೆ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಅಥವಾ ಪಾದಚಾರಿ ಮಾರ್ಗವನ್ನು ಅಗೆಯುವ ಮುನ್ನ ಬಿ.ಬಿ.ಎಂ.ಪಿ ವತಿಯಿಂದ ಅನುಮತಿ ಪಡೆದು ರಸ್ತೆ ಅಗೆಯುವಂತೆ ತಿಳಿಸಿದರು ಹಾಗೂ 16ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತ ರಸ್ತೆಗಳಲ್ಲಿ ಅಗೆದಿರುವ ಗುಂಡಿಗಳನ್ನು 1 ವಾರದೊಳಗಾಗಿ ವೈಜ್ಞಾನಿಕವಾಗಿ ಮುಚ್ಚಿ ಕ್ರಮವಹಿಸುವಂತೆ ತಿಳಿಸಿದರು.

6. **ಕಾಮಗಾರಿ ಇಲಾಖೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ. ರವೀಂದ್ರ ಹೊಸಕೇರಿ ರವರು ಮಾತನಾಡಿ 9ನೇ ಮುಖ್ಯರಸ್ತೆ 2ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ನಿರ್ಮಿಸಿರುವ ಕಲ್ವರ್ಟ್‌ನ ಪಕ್ಕದಲ್ಲಿ ಮಳೆನೀರು ಶೇಖರಣೆಯಾಗುತ್ತಿದ್ದು ಅದನ್ನು ಸರಿಪಡಿಸುವಂತೆ ಕೋರಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು.

7. **BBMP My City My Budget 2021-22**

ಸಭೆಯಲ್ಲಿ ಹಾಜರಿದ್ದ ಶ್ರೀ ಬಾಲಕೃಷ್ಣ ಎನ್ ಎಸ್ ರವರು ಮತ್ತು ಶ್ರೀ ನಾಗರಾಜ್ ರವರು ಮಾತನಾಡಿ 16ನೇ ಮುಖ್ಯರಸ್ತೆಯ 29ನೇ ಮುಖ್ಯರಸ್ತೆ ಜಂಕ್ಷನ್‌ನಲ್ಲಿ. 29ನೇ ಮುಖ್ಯರಸ್ತೆಯ ಪಾಲಿಕೆ ಜಾಗ, ಮತ್ತು ಜೆ.ಡಿ ಮರ ಕೊಳಚೆ ಪ್ರದೇಶದಲ್ಲಿ ಹೊಸದಾಗಿ ಸಾರ್ವಜನಿಕ ಶೌಚಲಯವನ್ನು ನಿರ್ಮಿಸಿಕೊಡುವಂತೆ ಕೋರಿದರು.

ಮುಂದುವರೆದು ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಿಯೂ ಸಹ ಈಜುಕೊಳ ಇಲ್ಲದೇ ಇರುವುದರಿಂದ ಕೆಂಪೇಗೌಡ ಆಟದ ಮೈದಾನದಲ್ಲಿ ಹೊಸದಾಗಿ ಈಜುಕೊಳ ನಿರ್ಮಿಸಿಕೊಡುವಂತೆ ಕೋರಿದರು. ಹಾಗೂ ಉದ್ಯಾನವನಗಳಲ್ಲಿ ಇರುವ ವ್ಯಾಯಮ ಸಾಮಗ್ರಿಗಳ ದುರಸ್ಥಿಪಡಿಸುವಂತೆ ಕೋರಿದರು

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರ ಸೂಕ್ತ ಕ್ರಮಕ್ಕಾಗಿ.**

**ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು ಹಾಗೂ ಈ ಹಿಂದೆ ಬಂದಿದ್ದಂತಹ ದೂರುಗಳನ್ನು ಖುದ್ದಾಗಿ ಸಹಾಯಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಸ್ಥಳ ಪರಿಶೀಲಿಸಿದರು.**

Nagu 5/12/2020
ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ



Scanned with CamScanner